Nov 12, 2012

ಪ್ರಜಾವಾಣಿ



ನಗರದಲ್ಲಿ ಶನಿವಾರ ನಡೆದ 'ಎಜಿ ಕಟ್ಟಡ ನಿರ್ಮಾಣ ಸಮೂಹ' ಸಂಸ್ಥೆಯ ರಾಜ್ಯ ಮಾರುಕಟ್ಟೆ ಪ್ರವೇಶ ಕಾರ್ಯಕ್ರಮದಲ್ಲಿ ಸಮೂಹದ ಅಧ್ಯಕ್ಷ ಶಬ್ಬೀರ್ ಸೈಫುದ್ದೀನ್ ಎಜಿ, ವಾಸ್ತುಶಿಲ್ಪಿ ಟೋನಿ ಅಶಾಯ್, ಕೇಂದ್ರ ಸಚಿವ ಶಶಿ ತರೂರ್ ಅವರ ಪತ್ನಿ ಸುನಂದಾ ತರೂರ್, ಬಾಲಿವುಡ್ ನಟಿ ಪರಿಣಿತಿ ಚೋಪ್ರಾ, ಶಾಸಕ ಎನ್.ಎ.ಹ್ಯಾರಿಸ್, ಉಪಮುಖ್ಯಮಂತ್ರಿ ಆರ್.ಅಶೋಕ, ಸಮೂಹದ ವ್ಯವಸ್ಥಾಪಕ ನಿರ್ದೇಶಕ ಹಿಶಂ ಸಯ್ಯದ್ ತಮೀಜ್ ಮತ್ತಿತರರು ಪಾಲ್ಗೊಂಡಿದ್ದರು

# ನಗರಕ್ಕೆ ಕಾಲಿಟ್ಟ 'ಎಜಿ'

ಬೆಂಗಳೂರು: 'ಬೆಳೆಯುತ್ತಿರುವ ಬೆಂಗಳೂರು ನಗರಕ್ಕೆ ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣ ಕಂಪೆನಿಗಳ ಅಗತ್ಯವಿದೆ' ಎಂದು ಉಪಮುಖ್ಯಮಂತ್ರಿ ಆರ್.ಅಶೋಕ ಹೇಳಿದರು. ನಗರದಲ್ಲಿ ಶನಿವಾರ ನಡೆದ 'ಎಜಿ ಕಟ್ಟಡ ನಿರ್ಮಾಣ ಸಮೂಹ' ಸಂಸ್ಥೆಯ ರಾಜ್ಯ ಮಾರುಕಟ್ಟೆ ಪ್ರವೇಶ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ನಗರದ ಅಭಿವೃದ್ಧಿಗಾಗಿ ಉತ್ತಮ ಗುಣಮಟ್ಟ ಹಾಗೂ ಆಕರ್ಷಕ ವಿನ್ಯಾಸದ ಕಟ್ಟಡಗಳು ಅಗತ್ಯ. ಗುಣಮಟ್ಟ ಹಾಗೂ ಹೊಸ ವಿನ್ಯಾಸದ ಕಟ್ಟಡಗಳನ್ನು ನಿರ್ಮಿಸುವ ಕಂಪೆನಿಗಳಿಗೆ ಮೂಲಸೌಕರ್ಯ ಒದಗಿಸಲು ಸರ್ಕಾರ ಸಿದ್ಧವಿದೆ' ಎಂದರು.

ಮಾರುಕಟ್ಟೆ ಪ್ರವೇಶವನ್ನು ಉದ್ಘಾಟಿಸಿ ಮಾತನಾಡಿದ ಬಾಲಿವುಡ್ ನಟಿ ಪರಿಣಿತಿ ಚೋಪ್ರಾ, 'ಬೆಂಗಳೂರು ನಗರವನ್ನು ನಾನು ಪ್ರೀತಿಸುತ್ತೇನೆ. ಇಲ್ಲಿ ಒಂದು ಸುಂದರ ಮನೆಯನ್ನು ಹೊಂದಬೇಕು ಎಂಬುದು ನನ್ನ ಕನಸು' ಎಂದರು.

ವಾಸ್ತುಶಿಲ್ಪಿ ಟೋನಿ ಅಶಾಯ್ ಮಾತನಾಡಿ, 'ಹಾಲಿವುಡ್ ಮತ್ತು ಬಾಲಿವುಡ್‌ನ ಅನೇಕ ನಟ ನಟಿಯರ ಮನೆಗಳನ್ನು ವಿನ್ಯಾಸ ಮಾಡಿದ್ದಕ್ಕಿಂತ ಭಿನ್ನವಾದ ಕೆಲಸವನ್ನು ಎಜಿ ಸಂಸ್ಥೆಗಾಗಿ ಅಪರೂಪದ ವಿನ್ಯಾಸ ಮಾಡಿದ್ದೇನೆ. ವಿಲಾಸಿ ಅಭಿರುಚಿಯ ಜನರಿಗಾಗಿ ಐಶಾರಾಮಿ ವಿನ್ಯಾಸಗಳನ್ನು ರೂಪಿಸಲಾಗಿದೆ' ಎಂದರು.

ಎಜಿ ಕಟ್ಟಡ ನಿರ್ಮಾಣ ಸಮೂಹದ ವ್ಯವಸ್ಥಾಪಕ ನಿರ್ದೇಶಕ ಹಿಶಂ ಸಯ್ಯದ್ ತಮೀಜ್ ಮಾತನಾಡಿ, 'ನಗರದಲ್ಲಿ ಐಶಾರಾಮಿ ಮನೆಗಳ ನಿರ್ಮಾಣಕ್ಕಾಗಿ ರೂ 600 ಕೋಟಿಗೂ ಹೆಚ್ಚು ಹಣವನ್ನು ತೊಡಗಿಸಲಾಗಿದೆ. ನಗರದ ವೈಟ್‌ಫೀಲ್ಡ್‌ನಲ್ಲಿ 2 ಕಡೆ 'ಅವೆನ್ಯೂ' ಮತ್ತು 'ಕೊರಿಂತ್' ಎಂಬ ಹೆಸರಿನ ವಿಲಾಸಿ ಮನೆಗಳ ಸಮುಚ್ಚಯ ತಲೆ ಎತ್ತಲಿದೆ. ಇವುಗಳ ಬೆಲೆ ಚದರ ಅಡಿಗೆ 6,400 ರೂಪಾಯಿ' ಎಂದರು.

EZZY GROUP